## ಗಮನ ಸೆಳೆಯುವ ಸೂಚನೆ

### ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಕನ್ನಡದ ಕಾರ್ಯಕ್ರಮಗಳಿಗೆ ಆದ್ಯತೆ ನೀಡದೇ ಇರುವುದು

SRI R. VENKATARAMAIAH.—I call the attention of the Minister for Information, Tourism, Culture and Bangalore Development to the inadequate coverage of Kannada Programmes by Bangalore Dooradarshan Centre.

**ಶ್ರೀ ಎಂ. ಪಿ. ಪ್ರಕಾಶ್.**—(ವಾರ್ತಾ ಪ್ರವಾಸೋದ್ಯಮ ಸಂಸ್ಕೃತಿ ಮಂತ್ರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರು)

ಬೆಂಗಳೂರು ದೂರದರ್ಶನ ಕೇಂದ್ರದಿಂದ ಪ್ರಸಾರವಾಗುವ ಕನ್ನಡ ಕಾರ್ಯಕ್ರಮಗಳ ಪ್ರಮಾಣ ಅತ್ಯಲ್ಪ. ಸೋಮವಾರ ೧–೦೨ ಘಂಟೆ ೪೦ ನಿಮಿಷ ಕನ್ನಡ ಕಾರ್ಯಕ್ರಮ ಪ್ರಸಾರವಾದರೆ, ಮಂಗಳವಾರ, ಬುಧವಾರ ಹಾಗೂ ಶುಕ್ರವಾರಗಳಂದು ವಾರ್ತೆಯೂ ಸೇರಿದಂತೆ ಕೇವಲ ೪೦ ನಿಮಿಷಗಳ ಕನ್ನಡ ಕಾರ್ಯಕ್ರಮಗಳ ಪ್ರಸಾರ. ಗುರುವಾರ ಇಂಗ್ಲೀಷ್ ಕಾರ್ಯಕ್ರಮ ಸೇರಿದಂತೆ ೧–೦೦ ಘಂಟೆ ೪೦ ನಿಮಿಷ ಸ್ಥಳೀಯ ಪ್ರಸಾರ, ಪ್ರತಿ ಶನಿವಾರ ಒಂದೂ ಕನ್ನಡ ಚಲನಚಿತ್ರ ಪ್ರಸಾರವಾದರೆ, ಭಾನುವಾರ ೧–೦೦ ಘಂಟೆಗೂ ಕಮ್ಮಿ ಅವಧಿಯ ಕನ್ನಡ ಕಾರ್ಯಕ್ರಮಗಳ ಪ್ರಸಾರ.

ಬೆಂಗಳೂರು ದೂರದರ್ಶನ ಕೇಂದ್ರವು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದರಿಂದ ಇದರ ಮೇಲೆ ರಾಜ್ಯ ಸರ್ಕಾರದ ಹಿಡಿತವಿರುವುದಿಲ್ಲ, ಆದರೂ ಸಹ ಬೆಂಗಳೂರು ದೂರದರ್ಶನ ಪ್ರಸಾರ ವೇಳೆಯಲ್ಲಿ ಕನ್ನಡ ಕಾರ್ಯಕ್ರಮಗಳಿಗೆ ಹೆಚ್ಚಿನ ಸಮಯ ಹಾಗೂ ಪ್ರಾಶಸ್ತ್ಯ ನೀಡಬೇಕೆಂದು, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆಯ ಸಚಿವರಿಗೆ ಪತ್ರ ಬರೆದಿದ್ದು, ಕೇಂದ್ರ ಸಚಿವರು ದಿನಾಂಕ ೨೭–೩–೧೯೮೭ರಂದು ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಕೆಳಗಿನಂತೆ ತಿಳಿಸಿದ್ದಾರೆ.—

ಬೆಂಗಳೂರು ದೂರದರ್ಶನ ಕೇಂದ್ರದ ಖಾಯಂ ಕಟ್ಟಡ ಹಾಗೂ ಸ್ಟುಡಿಯೋ ಕೆಲಸ ಪೂರ್ಣಗೊಂಡು, ಬೆಂಗಳೂರು ಕೇಂದ್ರ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದಾಗ ಹೆಚ್ಚು ಹೆಚ್ಚು ಕನ್ನಡ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ. ಇದೂ ಅಲ್ಲದೆ ಅಪ್ಲಿಂಕ್ ವ್ಯವಸ್ಥೆಯನ್ನು ಸಹ ಹೊಂದಲು ದೂರದರ್ಶನ ದರ್ಶನ ಅಧಿಕಾರಿಗಳು ದೂರ ಸಂಪರ್ಕ ಇಲಾಖೆ ಬೇಕಾದ ಉಪಕರಣಗಳನ್ನು ಒದಗಿಸಲು ಈಗಾಗಲೇ ಅಗತ್ಯ ಕ್ರಮ ಕೈಗೊಂಡಿದ್ದಾರೆಂದು ಸಹ ಕೇಂದ್ರ ಸಚಿವರು ತಿಳಿಸಿ, ಈ ಕೆಲಸವೆಲ್ಲಾ ಪೂರ್ಣಗೊಳ್ಳಲು ಇನ್ನೂ ಕನಿಷ್ಠ ೩ ವರ್ಷಗಳ ಕಾಲ ಬೇಕಾಗುತ್ತದೆಂದು ತಿಳಿಸಿರುತ್ತಾರೆ. ಇದೂ ಅಲ್ಲದೆ ಸಂಗೀತ, ನೃತ್ಯ ಮುಂತಾದ ಕಲೆಗಳ ಬಗ್ಗೆ ಬೆಂಗಳೂರು ದೂರದರ್ಶನ ಕೇಂದ್ರ ಅರ್ಪಿಸುತ್ತಿರುವ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಜಾಲಕ್ಕೆ ಸೇರಿಸಿ ಪ್ರಸಾರ ಮಾಡುತ್ತಿರುವುದಾಗಿ ಕೇಂದ್ರ ವಾರ್ತಾ ಸಚಿವರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯದ ಜನತೆ ಕನ್ನಡ ಕಾರ್ಯಕ್ರಮಗಳಿಗಾಗಿ ಇನ್ನೂ ೩ ವರ್ಷಗಳ ಕಾಲ ಕಾಯಲು ಸಾಧ್ಯವಿಲ್ಲವೆಂದೂ ಮತ್ತು ಎಲ್ಲೆಲ್ಲಿ ಮೈಕ್ರೋವೇವ್ ಜಾಲದ ಸಂಪರ್ಕವಿದೆಯೋ, ಅಲ್ಲೆಲ್ಲಾ ಬೆಂಗಳೂರು ಕೇಂದ್ರ ಪ್ರಸಾರ ಮಾಡುವ ಕಾರ್ಯಕ್ರಮಗಳನ್ನು ಆಯಾ ಜಿಲ್ಲೆಗಳಲ್ಲಿರುವ ದೂರದರ್ಶನ ಮರು ಪ್ರಸಾರ ಕೇಂದ್ರಗಳು ಮರು ಪ್ರಸಾರ ಮಾಡಲು ಅನುಕೂಲವಾಗುವಂತೆ ಮೈಕ್ರೋವೇವ್ ಸಂಪರ್ಕ ಕಲ್ಪಿಸಬೇಕೆಂದು ಒತ್ತಾಯ ಮಾಡಲಾಗುತ್ತಿದೆ.

ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಹಿಡಿತದಲ್ಲಿರುವ ಪ್ರಸಾರ ಮಾಧ್ಯಮದ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕೆಂದೂ ಮತ್ತು ಹೆಚ್ಚಿನ ಸ್ವಾಯತ್ತತೆ ಹಾಗೂ ರಾಜ್ಯ ಸರ್ಕಾರವನ್ನು ಹೆಚ್ಚಾಗಿ ಪ್ರತಿನಿಧಿಸುವ ೨ನೇ ಚಾನಲ್ ದೂರದರ್ಶನದ ಅಗತ್ಯತೆಯ ಬಗ್ಗೆ ಒತ್ತಾಯಿಸಿದ್ದಾರೆ.

ನವದೆಹಲಿಯಲ್ಲಿರುವ ಸದ್ಯದಲ್ಲಿಯೇ ನಡೆಯಲಿರುವ ಎಲ್ಲಾ ರಾಜ್ಯಗಳ ವಾರ್ತಾ ಸಚಿವರ ಸಮ್ಮೇಳನದಲ್ಲಿ ರಾಜ್ಯ ಜನತೆಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸದರಿ ವಿಷಯದಲ್ಲಿ ಮತ್ತೊಮ್ಮೆ ಒತ್ತಡ ತರಲಾಗುವುದು.

ಶ್ರೀ ಆರ್. ವೆಂಕಟರಾಮಯ್ಯ... ಈಗ ಬೊಂಬಾಯಿ, ಮಹಾರಾಷ್ಟ್ರ, ಕಲ್ಕತ್ತ ಮತ್ತು ಡೆಲ್ಲಿಯಲ್ಲಿ ಸೆಂಕೆಂಡ್ ಚಾನಲ್ ಪ್ರಾರಂಭಿಸಿದ್ದಾರೆ. ನಮ್ಮ ಬೆಂಗಳೂರಿನಲ್ಲಿಯೂ ಸಹ ಇದರ ಅವಶ್ಯಕತೆ ಜಾಸ್ತಿ ಇದೆ. ಜೊತೆಗೆ ಹಿಂದಿಯನ್ನು ಇಂಡೈರ್‌ಕ್ಟಾಗಿ ನಮ್ಮ ಮೇಲೆ ಹೊರಿಸಿಲಿಕ್ಕೆ ಪ್ರಯತ್ನ ನಡೆಯುತ್ತಿದೆ. ನಪರೂರವರು ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದ್ದರು. ಈಗ ನಮ್ಮಲ್ಲಿ ೪೦ ನಿಮಿಷ ಮಾತ್ರ ಕನ್ನಡದ ಪ್ರಸಾರ ಬರುತ್ತಿದೆ ಇದು ಬಹಳ ಅನ್ಯಾಯ. ತಾವು ಹೇಳಿದ ಪ್ರಕಾರ ನೋಡಿದರೆ ಇನ್ನು ಮೂರು ವರ್ಷ ಕಾಯಬೇಕೆಂದು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳಿಗೆ ಬರೆದ ಪತ್ರವನ್ನು ತಾವು ತಿಳಿಸಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಸೆಕೆಂಡ್ ಚಾನಲ್ ನಮಗೆ ಕೊಡುವಂತೆ ವ್ಯವಸ್ಥೆ ಮಾಡಬೇಕು. ಕೇಂದ್ರದ ಭಾಷೆಯನ್ನು ನಮ್ಮ ತಲೆಯ ಮೇಲೆ ಹೊರಿಸುವುದನ್ನು ತಪ್ಪಿಸಿ, ಕರ್ನಾಟಕ ರಾಜ್ಯದ ಬಗ್ಗೆಯಾದರೂ ಕೆಲವು ವಿಷಯಗಳನ್ನು ಸೆಕೆಂಡ್ ಚಾನಲ್ ಮುಖಾಂತರ ನಮಗೆ ಕೊಡಿಸುವಂತೆ ಆಗಬೇಕು.

ಈ ಬಗ್ಗೆ ಮಾನ್ಯ ಮಂಖ್ಯಮಂತ್ರಿಗಳೂ ಕೂಡ ವಿಷಯವನ್ನು ತಿಳಿಸಬೇಕು. ಈ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದಿರುವುದನ್ನು ನಾನು ನೋಡಿದ್ದೇನೆ. ಈಗಲಾದರೂ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಪ್ರಯತ್ನ ಮಾಡಬೇಕು. ಇನ್ನೂ ಮೂರು ವರ್ಷ ಕಾಯಬೇಕಾದರೆ, ಅಷ್ಟರವರೆಗೂ ಅವರ ಪ್ರಚಾರವನ್ನೇ ನಾವು ನೋಡುತ್ತಿರಬೇಕಾಗುತ್ತದೆ. ಆದ್ದರಿಂದ ಮಾನ್ಯ ಮಂಖ್ಯಮಂತ್ರಿಗಳು ಈ ಬಗ್ಗೆ ಕಾಳಜಿವಹಿಸಿ ಕೇಂದ್ರದ ಜೊತೆ ವ್ಯವಹರಿಸಿ ನಮಗೆ ತಕ್ಷಣವೇ ಸೆಕೆಂಡ್ ಚಾನಲ್‌ನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಂವಂತೆ ಒತ್ತಾಯಿಸುತ್ತೀರಾ ? ಆ ರೀತಿ ಒತ್ತಾಯಿಸುವ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಾ ? ಇದನ್ನು ಬೇಗ ಪ್ರಾರಂಭ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ೨ನೇ ಚಾನಲ್ ಅನ್ನು ಪ್ರಾರಂಭಿಸತಕ್ಕ ವಿಚಾರದಲ್ಲಿ ನಮ್ಮ ಸರ್ಕಾರದ ಅಭಿಪ್ರಾಯವನ್ನು ನಾವು ಅತ್ಯಂತ ಸ್ಪಷ್ಟವಾದ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ತಿಳಿಸಿದ್ದೇವೆ. ಈಗ ಮಹಾರಾಷ್ಟ್ರದಲ್ಲಿ ಸೆಕೆಂಡ್ ಚಾನಲ್ ಇದೆ. ಅದು ಕೆಲವೇ ಗಂಟೆ ಮಾತ್ರ. ಅದೇ ರೀತಿ ತಮಿಳುನಾಡಿನಲ್ಲೂ ಸೆಕೆಂಡ್ ಚಾನಲ್ ಇದೆ. ಮತ್ತೆ ದೆಹಲಿಯಲ್ಲೂ ಸೆಕೆಂಡ್ ಚಾನಲ್ ಇದೆ. ಸೆಕೆಂಡ್ ಚಾನಲ್‌ನ ಅರ್ಥ ಏನು ಅಂದರೆ ಒಂದು ಕಾರ್ಯಕ್ರಮ ಚಾನಲ್ ಒಂದರಲ್ಲಿ ಬರುತ್ತದೆ. ಸ್ಪೋರ್ಟ್ಸ್, ಮತ್ತೊಂದು ಎನ್‌ಟರ್‌ಟೈನ್‌ಮೆಂಟ್ ಕಾರ್ಯಕ್ರಮ, ಚಾನಲ್ ೨, ೩. ಅದರಲ್ಲಿ ಬರುತ್ತದೆ. ಅದು ಕೆಲವೇ ಗಂಟೆಗಳು ಮಾತ್ರ. ಅಂತಹ ಕಾರ್ಯಕ್ರಮವನ್ನು ನಮ್ಮ ಕರ್ನಾಟಕದಲ್ಲಿ ಕನ್ನಡದಲ್ಲಿ ಮಾಡುವುದಕ್ಕೆ ಒಪ್ಪಿದರೆ ಅದರಿಂದ ವಿಶೇಷವಾದ ಪ್ರಯೋಜನವಾಗುವುದಿಲ್ಲ. ಸೆಕೆಂಡ್ ಚಾನಲ್‌ನ ಉಪಯೋಗ ಯಾವಾಗ ಆಗುತ್ತದೆ ಎಂದರೆ, ನಮ್ಮ ಜನತೆ ಎಂದರೆ, ನಮ್ಮ ಸರ್ಕಾರಕ್ಕೆ ಈ ಸೆಕೆಂಡ್ ಚಾನಲ್‌ನ್ನು ನಡೆಸತಕ್ಕ ಸ್ವಾತಂತ್ರ್ಯವನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಾಗ ಮಾತ್ರ ಅದು ಆಗುತ್ತದೆ. ನಾವು ಇದನ್ನು ರಾಜಕೀಯಕ್ಕೆ ಉಪಯೋಗಿಸುವುದಿಲ್ಲ. ಇದನ್ನು ಜನತೆಯ ಶಿಕ್ಷಣಕ್ಕಾಗಿ, ಮನರಂಜನೆಗಾಗಿ, ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಮತ್ತು ಸ್ಪೋರ್ಟ್ಸ್ ಆಕ್ಟಿವಿಟೀಸ್‌ಗಾಗಿ ಇದನ್ನು ಉಪಯೋಗಿಸುತ್ತೇವೆ ಎನ್ನತಕ್ಕ ವಿಚಾರವನ್ನೂ ಕೂಡ ನಾವು ಅವರಿಗೆ ತಿಳಿಸಿದ್ದೇವೆ. ಆದರೆ ಇದನ್ನು ಕೇಂದ್ರ ಸರ್ಕಾರ ಒಪ್ಪುವ ಲಕ್ಷಣ ಕಾಣುತ್ತಿಲ್ಲ. ಬ್ರಿಟಿಷರ ಕಾಲದಲ್ಲಿ ಅಂದರೆ ೧೯೩೧ನೇ ಇಸವಿಯಲ್ಲಿ ಗೌರ್ನಿಂಗ್ ಕಾಯಿದೆ ಆಗಿದೆ, ಆದರೆ ಇನ್ನೂ ನಮಗೆ ಆಗ ಸ್ವಾತಂತ್ರ್ಯ ಬಂದಿರಲಿಲ್ಲ. ಆಗಲೇ ಒಂದು ಕಾಯಿದೆ ಇತ್ತು. ಆ ಕಾಯಿದೆಯಲ್ಲೂ ಕೂಡ ಆಗ ಟಿ.ವಿ. ಇರಲಿಲ್ಲ. ಆಕಾಶವಾಣಿ ಇತ್ತು. ಅದನ್ನು ಪ್ರತ್ಯೇಕವಾಗಿ ಬಯಸಿದರೆ, ಪ್ರಾಂತೀಯ ಸರ್ಕಾರಕ್ಕೆ ತನ್ನದೇ ಆದ ಆಕಾಶವಾಣಿಯನ್ನು ಅಂದರೆ ರೇಡಿಯೋವನ್ನು ನಡೆಸತಕ್ಕ ಅಧಿಕಾರವನ್ನು ಕೊಡುವ ಒಂದು ಕಲಮು ಅದರಲ್ಲಿದೆ. ಆದರೆ ಸ್ವಾತಂತ್ರ್ಯ ಬಂದಮೇಲೂ ಯಾವ ಬ್ರಿಟಿಷರನ್ನು ನಮ್ಮ ದೇಶದಿಂದ ಹೊರಗಡೆಗ ಓಡಿಸಿದ್ದೇವೆಯೋ, ಅವರನ್ನು ಓಡಿಸಿ ೪೦ ವರ್ಷವಾಯಿತು, ಈಗಲೂ ಕೂಡ ನಮಗೆ ಈ ವಿಚಾರದಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳನ್ನು ಆವಿಶ್ವಾಸಕ್ಕೆ ಎಡೆಮಾಡಿಕೊಡತಕ್ಕ

ಅಗತ್ಯ ಇಲ್ಲ. ರಾಜ್ಯ ಸರ್ಕಾರಗಳಿಗೆ ಆ ಒಂದು ಸ್ವಾತಂತ್ರ್ಯ ಇರಬೇಕು. ಆ ಒಂದು ಅಧಿಕಾರ ಇರಬೇಕೆಂಬುದೇ ಪ್ರಬಲವಾದ ನಮ್ಮ ವಾದ.

ಶ್ರೀ ಬಿ. ಲಕ್ಕಪ್ಪ.—ನೀವು ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಿತ್ತೀವೆಂಬ ಮನವರಿಕೆಯನ್ನು ಕೇಂದ್ರ ಸರ್ಕಾರಕ್ಕೆ ಮಾಡಿರಲಿಕ್ಕಿಲ್ಲ. ಅದರಿಂದಾಗಿಯೇ ಈ ಸಮಸ್ಯೆ ಉದ್ಭವವಾಗಿರಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಮತ್ತೊಂದು ಭರವಸೆಯನ್ನು ತಮಗೆ ಕೊಡುತ್ತಿದ್ದೇನೆ. ನಾವು ಈ ಸೆಕೆಂಡ್ ಚಾನಲ್‌ನ್ನು ರಾಜಕೀಯಕ್ಕಾಗಿ ಉಪಯೋಗಿಸುವುದಿಲ್ಲ. ರಾಷ್ಟ್ರ ವಿರೋಧಿ ಕೆಲಸಕ್ಕೆ ಉಪಯೋಗಿಸುವುದಿಲ್ಲ. ಈಗ ೨ನೇ ಚಾನಲ್ ಬಂದರೂ ಅದರಲ್ಲಿ ಏನು ಬರುತ್ತದೆಯೆಂಬುದು ನಿಮಗೂ ಗೊತ್ತಾಗುತ್ತದೆ. ಅದರಲ್ಲಿ ಏನು ಬರುತ್ತದೆಂದರೆ, ಬರೀ ಕೇಂದ್ರ ಸರ್ಕಾರದ ಕಾಂಗ್ರೆಸ್‌ನ ಪ್ರಚಾರ ಬರುತ್ತದೆ. ಪುನಃ ಪುನಃ ರಾಜೀವಗಾಂಧಿಯವರ ದರ್ಶನ ಆಗುತ್ತದೆಯೇ ಹೊರತು ಬೇರೆ ಏನೂ ಕಾರ್ಯಕ್ರಮ ಬರುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಪಶ್ಚಿಮ ಬಂಗಾಳದಲ್ಲಿ ಶ್ರೀಮಾನ್ ಜ್ಯೋತಿ ಬಸು ಅವರೂ ಕೂಡ ಸೆಕೆಂಡ್ ಚಾನಲ್ ಕೊಡಬೇಕೆಂದು ಹೇಳುತ್ತಿದ್ದಾರೆ. ಆಯಾ ಪ್ರಾಂತ್ಯ ಸರ್ಕಾರಗಳ ಪ್ರಚಾರಕ್ಕೆ ಇದು ಇರಬೇಕೆಂದು ಶ್ರೀಮಾನ್ ಜ್ಯೋತಿ ಬಸು ಹಾಗೂ ನಾನ್ ಕಾಂಗ್ರೆಸ್ ಸರ್ಕಾರಗಳ ಮುಖ್ಯ ಮಂತ್ರಿಗಳು ಕೂಡ ಇದನ್ನೇ ಹೇಳುತ್ತಿದ್ದಾರೆ. ಈಗ ಟಿ.ವಿ. ಪೂರ್ತಿಯಾಗಿ ಕೇಂದ್ರ ಸರ್ಕಾರವನ್ನು ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಅನೇಕ ಸಾರಿ ರಾಜ್ಯ ಸರ್ಕಾರಗಳನ್ನು ಅವಹೇಳನ ಮಾಡತಕ್ಕ ಸಂಸ್ಥೆಯಾಗಿದೆ. ಇದನ್ನು ಪ್ರತಿಭಟಿಸಿದ್ದಾರೆ. ಸೆಕೆಂಡ್ ಚಾನಲ್‌ನ್ನು ಪೂರ್ತಿಯಾಗಿ ನಮಗೆ ಕೊಡಬೇಕು. ಅದೂ ಕೂಡ ರಾಜ್ಯ ಸರ್ಕಾರಗಳ ಸ್ವಾಯತ್ತತೆಯಲ್ಲಿರಬೇಕೆಂದು ಕೇಳಿದ್ದಾರೆ. ಇದನ್ನು ಶ್ರೀಮಾನ್ ಜ್ಯೋತಿ ಬಸು ಹಾಗೂ ಇತರೆ ನಾನ್ ಕಾಂಗ್ರೆಸ್ ಗೌರ್ನಮೆಂಟ್‌ನ ಮುಖ್ಯಮಂತ್ರಿಗಳೂ ಕೂಡ ಹೇಳಿರತಕ್ಕಂತಹದ್ದು. ಆದೇರೀತಿಯಲ್ಲಿ ತಾವೂ ಕೂಡ ಕೇಂದ್ರವನ್ನು ಒತ್ತಾಯಿಸಬೇಕು. ಸೆಕೆಂಡ್ ಚಾನಲ್‌ನ್ನು ಕೊಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಅಪಮಾನವನ್ನು ಮಾಡಬೇಕೆಂದು ಹೇಳುತ್ತಿಲ್ಲ. ರಾಜ್ಯ ಸರ್ಕಾರಗಳ ಮನೋಭಾವನ್ನು ಪ್ರತಿವಾದಿಸಿ, ಎರಡನೆಯ ಚಾನಲ್‌ನ್ನು ಕೊಡಬೇಕೆಂದು ಕೇಳಿ. ತಾವು ಅದಕ್ಕೆ ಒಪ್ಪಿ ಕೇಂದ್ರ ಸರ್ಕಾರವನ್ನು ಬಲಾತ್ಕಾರ ಮಾಡಿ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಪಡೆಯಿರಿ ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರವನ್ನು ಬಲಾತ್ಕಾರ ಮಾಡತಕ್ಕಂಥ ಉಪಾಯವನ್ನು ಮಾನ್ಯ ಸದಸ್ಯರು ಅವರೇ ಹೇಳಬೇಕು.

## ನಿಯಮ ೩೩ಳಿರ ಮೇರೆಗೆ

೧. ಶಿವಮೊಗ್ಗ ಜಿಲ್ಲೆಯಲ್ಲಿ ಏತ ನೀರಾವರಿಗೋಸ್ಕರ ರೈತರಿಂದ ಹಣ ವಸೂಲಿ ಮಾಡಲು ನೋಟೀಸ್ ಕೊಟ್ಟಿರುವುದು.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ ಶಿವಮೊಗ್ಗ ಜಿಲ್ಲೆಯಲ್ಲಿ ಏತ ನೀರಾವರಿಗೋಸ್ಕರ ಕಳೆದ ಸಾಲಿನ ಅಂದಾಜು ಪಟ್ಟಿಯಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಆ ಬಗ್ಗೆ ರೈತರುಗಳಿಗೆ ನೋಟೀಸು ಕೊಡಲಾಗಿದೆ. ಏತ ನೀರಾವರಿ ಅಂದಾಜಿನ ವೆಚ್ಚದ ಪೈಕಿ ಶೇ. ೧೦ ರಷ್ಟನ್ನು ಸರಕಾರ ಕೊಡುವುದಾಗಿಯೂ, ಶೇ. ೧೫ ರಷ್ಟನ್ನು ಫಲಾನುಭವಿಗಳು ಎಂದರೆ ರೈತರು ಕೊಡಬೇಕೆಂದು ಉಳಿದ ಶೇ. ೭೫ ಭಾಗವನ್ನು ನಬಾರ್ಡ್ ಅಥವಾ ಬ್ಯಾಂಕುಗಳಿಂದ ಪಡೆದುಕೊಳ್ಳುವುದಾಗಿಯೂ ತೀರ್ಮಾನ ಕೈಗೊಂಡು ಒಬ್ಬೊಬ್ಬ ರೈತರು ಆಯಾ ಕಾಮಗಾರಿಯ ಅಂದಾಜು ವೆಚ್ಚದ ಪ್ರಕಾರ ಅವರ ಭಾಗವಾದ ಶೇ. ೧೫ರ ಪಾಲಿನಲ್ಲಿ ಮಂಗಡವಾಗಿ ಎಕರೆಗೆ ೯೦೦ ರೂಪಾಯಿಗಳಿಂದ ೧೫೦೦ ರೂಪಾಯಿಗಳವರೆಗೆ ೧೫ ದಿನಗಳೊಳಗಾಗಿ ಕಟ್ಟಬೇಕೆಂದು ಆರೀತಿ ಕಟ್ಟದೆ ಹೋದ ಪಕ್ಷದಲ್ಲಿ ಸದರಿ ಕಾಮಗಾರಿಯನ್ನು ಬೇರೆಡೆಗೆ ಬದಲಾಯಿಸಲಾಗುತ್ತದೆಂದು ನೋಟೀಸು ಕೊಡಲಾಗಿದೆ. ಇದಲ್ಲದೆ, ಬ್ಯಾಂಕಿನ ಸಾಲವಾದ ಶೇ. ೭೫ ಭಾಗವನ್ನು ಅಸಲಿನ ಜೊತೆಗೆ ಬಡ್ಡಿ ಮತ್ತು ನೀರಾವರಿ ದರಗಳನ್ನು ಕಾಲಕಾಲಕ್ಕೆ ರೈತರು ಕಟ್ಟಿಕೊಂಡು ಹೋಗಬೇಕೆಂದು ತಿಳಿಸಲಾಗಿದೆ. ಇದುವರೆಗೆ ಸರಕಾರವೇ ಎಲ್ಲಾ ವೆಚ್ಚವನ್ನೂ ವಹಿಸಿಕೊಂಡು ಏತ ನೀರಾವರಿ ಕಾಮಗಾರಿಗಳನ್ನು ಮಾಡಿಸಿಕೊಡುತ್ತಿದ್ದು, ರೈತರಿಗೆ ಬಹಳ